ಓ.ಎಸ್. ನಂಬರ:-5 /2024

ಪಿ.ಡಬ್ಲೂ-:-1 : ಪಾರ್ವತಿ ಗಂಡ ಧರ್ಮಣ್ಣ ಹೊರಪೇಟಿ

ದಿನಾಂಕ:- 05-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಪಾಟೀ ಸವಾಲು : ೬ನೇ ಪ್ರತಿವಾದಿ ಪರ ಶ್ರೀ ಎಂ ಎಂ ಕೆ ವಕೀಲರಿಂದ :-*

ದಾವಾ ಆಸ್ತಿಗಳನ್ನು ನಮ್ಮ ತಂದೆ ಖರೀದಿ ಮಾಡಿರುತ್ತಾರೆ. ೧ ಮತ್ತು ೨ನೇ ಪ್ರತಿವಾದಿಗಳು ನನ್ನ ತಮ್ಮನ ಮಕ್ಕಳಾಗಿರುತ್ತಾರೆ. ೪ನೇ ಪ್ರತಿವಾದಿ ನನ್ನ ತಮ್ಮನ ಹೆಂಡತಿಯಾಗಿರುತ್ತಾರೆ. ೬ನೇ ಪ್ರತಿವಾದಿ ನನ್ನ ತಂಗಿಯಾಗಿರುತ್ತಾರೆ. ನನ್ನ ತಂದೆಯ ಹೆಸರು ಜಗದೇವಪ್ಪ ಆಗಿರುತ್ತದೆ. ೪ ಮತ್ತು ೫ನೇ ಪ್ರತಿವಾದಿಗಳು ನನ್ನ ತಮ್ಮ ಸೂರ್ಯಕಾಂತರವರ ಹೆಂಡತಿ ಮತ್ತು ಮಗಳು ಆಗಿರುತ್ತಾರೆ. ನನ್ನ ತಮ್ಮ ಸೂರ್ಯಕಾಂತರವರಿಗೆ ಚಂದ್ರಕಾಂತ ಎಂಬ ಮಗ ಇದ್ದ ಎಂದರೆ ಸರಿ. ಸಾಕ್ಷಿಯು ಸದರಿ ಚಂದ್ರಕಾಂತ ಈಗ ಮೃತರಾಗಿರುತ್ತಾರೆ ಎನ್ನುತ್ತಾರೆ. ಚಂದ್ರಕಾಂತರವರಿಗೆ ಮದುವೆ ಆಗಿರಲಿಲ್ಲ. ಈ ಮೊದಲು ಸೂರ್ಯಕಾಂತ, ನಾಗಮ್ಮ ಮತ್ತು ಚಂದ್ರಕಾಂತರವರು ಪಾಲು ಕೇಳಿ ಓ ಎಸ್ ನಂಬರ ೨೮/೨೦೧೪ ಎಂಬ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಮೇಲೆ ಎಫ್ ಡಿ ಪಿ ನಂಬರ ೮/೨೦೧೬ ಎಂಬ ಕೇಸೂ ಕೂಡಾ ಆಗಿತ್ತು ಎಂದರೆ ಸರಿಯಲ್ಲ.

೨. ಸೂರ್ಯಕಾಂತರವರು ತಮ್ಮ ಪಾಲಿಗೆ ಬಂದ ಜಮೀನನ್ನು ೭ನೇ ಪ್ರತಿವಾದಿಗೆ ತಮ್ಮ ಪಾಪಂಚಿಕ ಅಡಚಣೆಯ ಸಲುವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾವ ಸರ್ವೆ ನಂಬರ ಜಮೀನನ್ನು ೭ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ ೧೩/೬ ರಲ್ಲಿ ೧ ಎಕರೆ ಜಮೀನನ್ನು ನನ್ನ ತಮ್ಮ ಸೂರ್ಯಕಾಂತರವರು ತಮ್ಮ ಕುಟುಂಬದ ಅಡಚಣೆಯ ಸಲುವಾಗಿ ೭ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

೩. ೭ನೇ ಪ್ರತಿವಾದಿ ರೂ.೨,೮೦,೦೦೦/- ಗೆ ಸದರಿ ಜಮೀನನ್ನು ದಿನಾಂಕ 31-03-2023 ರಂದು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೧೪/೬ ರ ೧ ಎಕರೆ ೨೪ ಗುಂಟೆ ಜಮೀನನ್ನೂ ಕೂಡಾ ನನ್ನ ತಮ್ಮ ಸೂರ್ಯಕಾಂತರವರು ೭ನೇ ಪ್ರತಿವಾದಿಗೆ ತಮ್ಮ ಕುಟುಂಬದ ಅಡಚಣೆಯ ಸಲುವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೭ನೇ ಪ್ರತಿವಾದಿ ರೂ.೪,೪೮,೦೦೦/- ಗೆ ಸದರಿ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ೧ನೇ ಪ್ರತಿವಾದಿ ನಮಗೆ ತಲಾ ೫ ಲಕ್ಷ ರೂಪಾಯಿ ಹಣ ಮತ್ತು ೫ ತೊಲೆ ಬಂಗಾರ ನೀಡಿರುತ್ತಾರೆ ಆದರೆ ೪ ಮತ್ತು ೫ನೇ ಪ್ರತಿವಾದಿಗಳು ಏನೂ ನೀಡಿಲ್ಲ ಎನ್ನುತ್ತಾರೆ.

ಸೂರ್ಯಕಾಂತರವರಿಗೂ ಮತ್ತು ನಮಗೂ ಸಂಬಂಧ ಚೆನ್ನಾಗಿ ಇದ್ದುದರಿಂದ ನಾವು ಸೂರ್ಯಕಾಂತರವರ ಪಾಲಿನಲ್ಲಿ ಪಾಲು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಮ್ಮ ಸೂರ್ಯಕಾಂತರವರು ಮೃತರಾದ ನಂತರ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿ.

೪. ನನ್ನ ತಮ್ಮ ಸೂರ್ಯಕಾಂತ ಇದ್ದಾಗ ಯಾವುದೆ ಪಾಲು ಕೇಳದೆ ನನ್ನ ತಮ್ಮ ಸೂರ್ಯಕಾಂತ ಮೃತರಾದ ನಂತರ ಅವರ ಹೆಂಡತಿ ಮತ್ತು ಮಗಳಾದ ೪ ಮತ್ತು ೫ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಸೂರ್ಯಕಾಂತ ಇರುವಾಗಲೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ೪ನೇ ಪ್ರತಿವಾದಿ ನಾಗಮ್ಮರವರ ಹೆಸರಿನಲ್ಲಿ ೬ ವರೆ ಎಕರೆ ಜಮೀನು ಇದೆ, ಅವರು ತನ್ನ ತಮ್ಮನಿಗೆ ದಾನಪತ್ರ ಮಾಡುವ ವಿಚಾರ ಗೊತ್ತಾಗಿ ನಾನು ಈ ದಾವೆಯನ್ನು ಹಾಕಿರುತ್ತೇನೆ ಎನ್ನುತ್ತಾರೆ. ೭ನೇ ಪ್ರತಿವಾದಿ ಮಹಾನಂದರವರು ಖರೀದಿಸಿದ ಜಮೀನಿಗೂ ಮತ್ತು ನನಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ೭ನೇ ಪ್ರತಿವಾದಿ ತಾವು ಖರೀದಿಸಿದ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೭ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ಮೇಲೆ ಯಾವುದೆ ಸಂಬಂಧ ಇರದೆ ಇದ್ದರೂ ಸಹ ಒಂದು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.